**ಅಸಲು ದಾವೆ ಸಂಖ್ಯೆ 16/2017**

**ಪಿ.ಡಬ್ಲ್ಯೂ 03**

**ದಿಃ 16.03.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1, 4 ಮತ್ತು 5 ಪರ ಶ್ರೀ ಕೆ.ಎಸ್.ಆರ್ ವಕೀಲರಿಂದಃ**

ಪಾತಪೂರು ಗ್ರಾಮದಲ್ಲಿ ನನಗೆ ಸೇರಿದ ಆಸ್ತಿಗಳು ಇಲ್ಲ. ಹಿರೆಹಣಗಿ ಗ್ರಾಮದಲ್ಲಿ ನನಗೆ ಸೇರಿದ ಆಸ್ತಿಗಳು ಇವೆ. ನಾನು ಹಿರೆಹಣಗಿ ಗ್ರಾಮದಲ್ಲಿ ವಾಸ ಇರುವುದರಿಂದ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ವಾದಿಯ ತಂದೆಯನ್ನು ನೋಡಿರುತ್ತೇನೆ, ತಾಯಿಯನ್ನು ನೋಡಿರುವುದಿಲ್ಲ. ವಾದಿಯ ತಂದೆ ಹೆಸರು ನಾಗನಗೌಡ. ಸದರಿ ನಾಗನಗೌಡ ಇವರಿಗೆ ಒಟ್ಟು 6 ಜನ ಮಕ್ಕಳು. 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನಾಗನಗೌಡ ಇವರಿಗೆ ಪಾತಪೂರು ಗ್ರಾಮದಲ್ಲಿ ಒಟ್ಟು 7 ಜಮೀನು, ಕಲಂಗೇರಿ ಗ್ರಾಮದಲ್ಲಿ 2 ಜಮೀನುಗಳು ಇದ್ದವು. ಅವುಗಳ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಸಹಿ ಮಾಡಿರುತ್ತೇನೆ. ಸದರಿ ಎಲ್ಲ ಜಮೀನುಗಳು ನಾಗನಗೌಡ ಇವರ ಹೆಸರಿನಲ್ಲಿ ದಾಖಲೆಗಳು ಇದ್ದ ಬಗ್ಗೆ ನೋಡಿಲ್ಲ ಆದರೆ ಕೇಳಿರುತ್ತೇನೆ. ಸದರಿ ಜಮೀನುಗಳ ಚೆಕ್‌ಬಂದಿ ಹೇಳಲು ಬರುವುದಿಲ್ಲ. ನಾಗನಗೌಡ ಇವರಿಗೆ ಪಾತಪೂರು ಗ್ರಾಮದಲ್ಲಿ ಕ್ರಮಸಂಖ್ಯೆ 1 ರಿಂದ 3 ಜಮೀನು ಹೊರತು ಪಡಿಸಿ ಬೇರೆ ಯಾವುದೇ ಜಮೀನುಗಳು ಇಲ್ಲ ಅಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.3 ರವರ ಪರ ಶ್ರೀ ಎಮ್.ಕೆ.ಪಿ ವಕೀಲರಿಂದಃ**

2. ವಾದಿ, 1 ಮತ್ತು 3 ನೇ ಪ್ರತಿವಾದಿ ಸುಮಾರು 20-25 ವರ್ಷಗಳಿಂದ ಬೇರೆ-ಬೇರೆ ವಾಸ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮಾನ್ವಿಯಲ್ಲಿ 25-30 ವರ್ಷಗಳಿಂದ ವಾಸ ಇರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಾನ್ವಿಯಲ್ಲಿ ವಾಸ ಇದ್ದರು ಆಸ್ತಿಯಲ್ಲಿ ಒಟ್ಟಿಗೆ ಇದ್ದರು ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಯರು 2 ನೇ ಪ್ರತಿವಾದಿಯ ಮನೆಯಲ್ಲಿ ವಾಸ ಇದ್ದರು. 2 ನೇ ಪ್ರತಿವಾದಿಗೆ ವಾಸ ಇರುವ ಮನೆ ಅವರ ಭಾಗಕ್ಕೆ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ 3 ನೇ ಪ್ರತಿವಾದಿ ಎಂದೂ ವಾಸ ಇಲ್ಲ ಅಂದರೆ ಸರಿಯಲ್ಲ. ನಾನು ಹಿರೆಹಣಗಿ ಗ್ರಾಮದ ನಿವಾಸಿ ಆಗಿರುವುದರಿಂದ ಪಾತಪೂರು ಗ್ರಾಮದಲ್ಲಿ ವಾದಿ ಮತ್ತು ಪ್ರತಿವಾದಿಯರು ಯಾವ ಮನೆಯಲ್ಲಿ ವಾಸ ಇದ್ದರು ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ವಾದಿ ತನ್ನ ಹೆಂಡತಿ ಬಲ್ಲಟಗಿ ಗ್ರಾಮದಲ್ಲಿ ವಾಸ ಇದ್ದ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಪಾತಪೂರದಲ್ಲಿ ವಾಸ ಇದ್ದ ಹೆಂಡತಿಯ ಮನೆಗೆ ಹೋಗಿ-ಬರುತ್ತಿದ್ದ ಎಂದು ಹೇಳುತ್ತಾರೆ. ವಾದಿ ಬಲ್ಲಟಗಿ ಗ್ರಾಮಕ್ಕೆ ಮನೆಯ ಅಳಿಯತನಕ್ಕೆ ಹೋಗಿದ್ದ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೊದಲು ಯಾರ ಹೆಸರಿನಲ್ಲಿ ಇದ್ದವು ನಂತರ ಯಾರ ಹೆಸರಿಗೆ ವರ್ಗಾವಣೆ ಆಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ವಾದಿ ತನ್ನ ಹೆಂಡತಿಯಿಂದ ಬಂದ ಆಸ್ತಿಗಳನ್ನು ಮಾರಾಟ ಮಾಡಿ ಪ್ರತಿವಾದಿಯರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾನೆ ಅಂದರೆ ಸರಿಯಲ್ಲ.

3. ನಾಗನಗೌಡ 3 ನೇ ಪ್ರತಿವಾದಿಗೆ ನೊಂದಾಯಿತ ದಾನಪತ್ರದ ಮೂಲಕ ದಾವ ಆಸ್ತಿ ಕ್ರಮಸಂಖ್ಯೆ 1 ನ್ನು ವರ್ಗಾಯಿಸಿರುವುದು ನನಗೆ ಮಾಹಿತಿ ಇಲ್ಲ. ದಾನ ಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇರುತ್ತವೆ ಅಂದರೆ ನನಗೆ ಮಾಹಿತಿ ಇಲ್ಲ. 3 ನೇ ಪ್ರತಿವಾದಿ ಮೃತಪಟ್ಟ ನಂತರ ಸದರಿ ಜಮೀನು ತನ್ನ ಹೆಂಡತಿ ಹೆಸರಿನಲ್ಲಿ ವರ್ಗಾಯಿಸಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. 2009 ರಿಂದ 3 ನೇ ಪ್ರತಿವಾದಿ ದಾನಪತ್ರದ ಆಧಾರದ ಮೇಲೆ ಸದರಿ ಜಮೀನಿನಲ್ಲಿ ಹಕ್ಕು ಪಡೆದಿದ್ದು ವಾದಿಗೆ ಆಗಲಿ ಅಥವಾ ಇತರೆ ಪ್ರತಿವಾದಿಯರಿಗೆ ಆಗಲಿ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ನನಗೆ ವಯಕ್ತಿಕವಾಗಿ ಯಾವುದೇ ಮಾಹಿತಿ ಇರದೆ ಇದ್ದರು ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ವಾದಿ ಮತ್ತು ಪ್ರತಿವಾದಿಯರಿಗೆ ಪಾತಪೂರು ಗ್ರಾಮದಲ್ಲಿ ಒಂದು ದೊಡ್ಡ ಮನೆ ಇದೆ. ಬೇರೆ ಮನೆಗಳು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ.

**ಶ್ರೀ ಕೆ.ಎಸ್.ಆರ್ ವಕೀಲರು ಮಾಡಿದ ಪಾಟೀ ಸವಾಲನ್ನು ಶ್ರೀ ಎಮ್.ಕೆ.ಪಿ ವಕೀಲರು ಅಳವಡಿಸಿಕೊಂಡಿರುತ್ತಾರೆ.**

**ಪಾಟೀ ಸವಾಲುಃ ಪ್ರತಿವಾದಿ ನಂ.3(ಎ) ರಿಂದ (ಸಿ) ಮತ್ತು 10 ನೇ ಪ್ರತಿವಾದಿ ಪರ ಶ್ರೀ ವಿ.ಹೆಚ್ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)**
**ಓ.ಹೇ.ಕೆ.ಸರಿ ಇದೆ**

**ಪ್ರ.ದ.ನ್ಯಾದಂ.ಗಳು, ಮಾನ್ವಿ**